ಅನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಮಧ್ಯಾಹ್ನ ತೆಗೆದುಕೊಳ್ಳೋಣ. Let us go to next question.

152 (2260) **ಶ್ರೀರಾಮರೆಡ್ಡಿ ಜಿ.ವಿ.**

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) ಗ್ರಾಮ ಪಂಚಾಯ್ತಿ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಪದೇ ಪದೇ ಮುಷ್ಕರಗಳ ಮೊರೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದ್ದಲ್ಲಿ, ಗ್ರಾಮ ಪಂಚಾಯ್ತಿ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಡಾ|| ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ಹೌದು

ಆ) ಗ್ರಾಮ ಪಂಚಾಯತಿ ನೌಕರರ ಹಲವು ಬೇಡಿಕೆಗಳಲ್ಲಿ ಬಹುತೇಕ ಬೇಡಿಕೆಗಳನ್ನು ಈಡೇರಿಸಲಾಗಿದೆ.

1) ಗ್ರಾಮ ಪಂಚಾಯತಿ ಸಿಬ್ಬಂದಿಯ ಮಾಸಿಕ ವೇತನವನ್ನು ಸರ್ಕಾರದ ಅನುದಾನದ ಮೊತ್ತದಿಂದ ಒಟ್ಟಾರೆ ಗ್ರಾಮಪಂಚಾಯತಿ ನಿಧಿಯ ಶೇಕಡ 40ರಷ್ಟಕ್ಕೆ ಮೀರದಂತೆ ಪಾವತಿಸಲು ಸುತ್ತೋಲೆ ಹೊರಡಿಸಲಾಗಿದೆ. (ಗ್ರಾಅಪ 230 ಗ್ರಾಪಂಅ 04 ದಿನಾಂಕ : 14.6.04)

2) ಗ್ರಾಮ ಪಂಚಾಯತಿ ಸಿಬ್ಬಂದಿಯ ಮಾಸಿಕ ವೇತನದ ಮೊತ್ತವನ್ನು ದಿನಾಂಕ : 20.06.2003 ರಿಂದ ಪರಿಷ್ಕರಿಸಲಾಗಿದೆ ಹಾಗೂ ರಜಾ ಸೌಲಭ್ಯದ ಬಗ್ಗೆ ಸುತ್ತೋಲೆ ಹೊರಡಿಸಲಾಗಿದೆ. (ಗ್ರಾಅಪ 47 ಗ್ರಾಪಂಸಿ 03, ದಿನಾಂಕ : 20.6.03 ಹಾಗೂ ಗ್ರಾಅಪ 14 ಗ್ರಾಪಂಸಿ 03 ದಿನಾಂಕ : 15.7.03)

3) ಮೃತ ಹಾಗೂ ನಿವೃತ್ತ ಸಿಬ್ಬಂದಿಗೆ ಲಭ್ಯವಾಗುವ ಮರಣೋತ್ತರ ಉಪದಾನವನ್ನು ಸ್ಥಳೀಯವಾಗಿ ಮಂಜೂರು ಮಾಡಲು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

4) ಗ್ರೇಡ್-2 ವೃಂದದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಯ ಒಟ್ಟಾರೆ ವೃಂದಬಲದ ಶೇಕಡ 40 ರಷ್ಟು ಹುದ್ದೆಗಳಿಗೆ ಗ್ರಾಮ ಪಂಚಾಯತಿಯ ಬಿಲ್ ಕಲೆಕ್ಟರ್ ವೃಂದದಿಂದ ಅರ್ಹ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ವೃಂದ ಮತ್ತು ನೇಮಕಾತಿ

ನಿಯಮಾವಳಿಗೆ ತಿದ್ದುಪಡಿ ತರಲಾಗಿದೆ. (ಅಧಿಸೂಚನಾ ಸಂಖ್ಯೆ: ಗ್ರಾಅಪ 84 ಗ್ರಾಪಂಕಾ 02 ದಿನಾಂಕ : 5.11.03)

5) ಗ್ರಾಮ ಪಂಚಾಯತಿ ವರ್ಗದವರಿಗೆ ಸೇವಾಪುಸ್ತಕ ಸೌಲಭ್ಯ ಒದಗಿಸಲಾಗಿದೆ. (ಸುತ್ತೋಲೆ ಸಂಖ್ಯೆ: ಗ್ರಾಅಪ 84 ಗ್ರಾಪಂಸಿ 04 ದಿನಾಂಕ : 03.12.2004)

6) ಗ್ರಾಮ ಪಂಚಾಯತಿ ಸಿಬ್ಬಂದಿಯ ಸೇವಾ ಭದ್ರತೆಗಾಗಿ ಅವರುಗಳಿಗೆ ಸಂಬಂಧಿಸಿದಂತೆ ನೇಮಕಾತಿ ಹಾಗೂ ಶಿಸ್ತಿನ ಕ್ರಮದ ಬಗ್ಗೆ ಸರ್ಕಾರದ ಆದೇಶ ಹೊರಡಿಸಲಾಗಿದೆ. (ಗ್ರಾಅಪ 14 ಗ್ರಾಪಂಸಿ 02 ದಿನಾಂಕ : 20.06.03)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಗ್ರಾಮ ಪಂಚಾಯ್ತಿ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಪದೇ ಪದೇ ಮುಷ್ಕರಗಳ ಮೊರೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಉತ್ತರದಲ್ಲಿ ಹೌದು ಎಂದು ಹೇಳಿದ್ದಾರೆ. ಇದ್ದಲ್ಲಿ, ಗ್ರಾಮಪಂಚಾಯಿತಿ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದರೆ ಒಂದು ಪಟ್ಟಿಯನ್ನು ಹೇಳಿದ್ದಾರೆ. ಆ ಪಟ್ಟಿಯಲ್ಲಿರುವ ಎಲ್ಲವನ್ನೂ ಓದಲು ಹೋದರೆ ಟೈಮ್ ಆಗುತ್ತದೆ. ನಾವು ಎರಡು ಮೂರು ಸಲ ಮಂತ್ರಿಗಳ ಹತ್ತಿರ ಕುಳಿತು ಸಭೆ ಮಾಡಿ ಚರ್ಚೆ ಮಾಡಿದ್ದೇವೆ. ಇದಕ್ಕೆಲ್ಲ ಅವರು ಒಪ್ಪಿಕೊಂಡಿದ್ದಾರೆ. ಅದು ನಿಜ, ಆದರೆ ಒಂದೇ ಒಂದು ಕಾಸು ಅವರಿಗೆ ಸಂಬಳವಾಗಿ ಕೊಡಲು ಬಿಡುಗಡೆ ಮಾಡಿಲ್ಲ, ಅದನ್ನು ತಾವು ಹೇಳಬೇಕು, ಸರ್ಕಾರ ಏನೇನು ಒಪ್ಪಿಕೊಂಡಿದೆ ಎಂದು ತಾವು ಹೇಳಿದ್ದೀರಿ, ಆದರೆ ಅದು ಜಾರಿಗೆ ಬಂದಿದೆಯೋ? ಅದನ್ನು ತಾವು ಹೇಳಬೇಕು. ತಾವು ಹೇಳಿದ ಪ್ರಕಾರ 40 ಪರ್‌ಸೆಂಟ್ ಹಣವನ್ನೇನು ಅನುದಾನ ಕೊಡುತ್ತಿದ್ದೀರಿ ಅದು ನೌಕರರ ಸಂಬಳಕ್ಕೆಂದು ಹೇಳಿ ತೆಗೆದು ಇಟ್ಟಿದ್ದೀರಾ? ಎಲ್ಲಿ, ಇಟ್ಟಿದ್ದೀರಿ? ನಾವು ಅವರಿಗೆ ನಿರ್ದಿಷ್ಟವಾಗಿ ತಮ್ಮ ಮುಂದೆ ಚರ್ಚೆ ಮಾಡುವಾಗ ಹೇಳಿದ್ದೀರಿ, ಅನುದಾನದಲ್ಲಿ ನಲವತ್ತು ಪರ್‌ಸೆಂಟ್ ಏನು ನಿಗದಿ ಮಾಡಿದ್ದೀರಿ ಅದು ಡೈರೆಕ್ಟ್ ಆಗಿ ಅವರ ಬ್ಯಾಂಕ್ ಅಕೌಂಟ್‌ಗೆ ಕಳಿಸಿಬಿಡಿ, ಪಂಚಾಯಿತಿಯವರಿಗೆ ಕೊಟ್ಟರೆ ಅವರು ಯಾವ್ಯಾವುದಕ್ಕೋ ಖರ್ಚು ಮಾಡಿ ಅನಂತರ ಹಣವೇ ಇಲ್ಲವೆಂದು ಹೇಳಿಬಿಡುತ್ತಾರೆ. ಆದ್ದರಿಂದ ನೇರವಾಗಿ ಅವರ ಅಕೌಂಟ್‌ಗೆ ಕಳಿಸಿ ಎಂದು ಹೇಳಿದ್ದೇವೆ. ನೀವು ಅದನ್ನೂ ಮಾಡಲಿಲ್ಲ. ಹಣ ಬಿಡುಗಡೆಯಾಗಲಿಲ್ಲ, ಹಣ ಬಿಡುಗಡೆಯಾಗಿದೆಯಾ? ಹಣ ಬಿಡುಗಡೆಯಾಗಿಲ್ಲ, ಮತ್ತು ತಾವು ಏನು ಹೇಳಿದ್ದಿರಿ ಅದೂ ಜಾರಿಯಾಗಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಮಾನ್ಯ ಶ್ರೀರಾಮರೆಡ್ಡಿಯವರು, ಪಂಚಾಯಿತಿ ನೌಕರರ ಸಂಘದ ಅಧ್ಯಕ್ಷರಾದ ಮಾರುತಿಮಾನಪಡೆ ಸಿದ್ದನಗೌಡರು ನಾವೆಲ್ಲ 1.2.2005 ರಂದು ಸಭೆ ಮಾಡಿದೆವು. ಪುನಃ ಮುಷ್ಕರ ನಿರತ ಪಂಚಾಯಿತಿ ನೌಕರರ ಸಭೆಗೆ ನಾನು ಹೋಗಿದ್ದೆ, ಗುಲ್ಬರ್ಗಾದಲ್ಲೂ ನಾನು ಭೇಟಿ ಮಾಡಿದ್ದೇನೆ. ಅವರು ಕೆಲವು ನ್ಯಾಯಯುತವಾದ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದರು ಮತ್ತು ನಮ್ಮ ಚೇಂಬರ್‌ನಲ್ಲೂ ಅವರುಗಳ ಜೊತೆ ಚರ್ಚೆ ಮಾಡಿ ಕೆಲವು ವಿಚಾರಗಳನ್ನು ಒಪ್ಪಿ ಅವರಿಗೆ ಏನು ಮಾಡಬಹುದು, ಏನು ಮಾಡುವುದಕ್ಕಾಗುವುದಿಲ್ಲ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೆವು. ಏನು ಒಪ್ಪಿಗೆಯಾಗಿದೆ ಅದಕ್ಕೆ ಹಣ ಬಿಡುಗಡೆ ಮಾಡಬೇಕು ಅದು ಜಾರಿಯಾಗಿಲ್ಲ ಎಂಬ ಅನುಮಾನವನ್ನು ಮಾನ್ಯ ಸದಸ್ಯರು ವ್ಯಕ್ತಮಾಡಿದ್ದಾರೆ!

ಕೆಲವರು ಒಂದು ವರ್ಷದಿಂದ ಸ್ಯಾಲರಿಯನ್ನೇ ಕೊಟ್ಟಿಲ್ಲ, ಅವರಿಗೆ ಸ್ಯಾಲರಿಯನ್ನು ರಿಲೀಸ್ ಮಾಡಿ, 56 ಕೋಟಿ ವಿದ್ಯುತ್‌ಗೆ ರಿಲೀಸ್ ಮಾಡುವಾಗ 40 ಕೋಟಿ ಸ್ಯಾಲರಿಗೆ ಕೊಡಿ ಎಂದು ಕೇಳಿದ್ದಾರೆ. ಆದರೆ ಜಿಲ್ಲಾ ಪಂಚಾಯಿತಿಯಿಂದ ವರದಿಯನ್ನು ತರಿಸಿ ಯಾರ್ಯಾರಿಗೆ ಸಂಬಳ ಕೊಟ್ಟಿಲ್ಲ ಎಂಬ ಬಗ್ಗೆ ಹಣಕಾಸು ಸಚಿವರೊಂದಿಗೆ ಚರ್ಚೆ ಮಾಡಿ ಅದನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಉಳಿದಂತೆ ಏನು ಬೇಡಿಕೆಯನ್ನು ಹೇಳಿದ್ದಾರೆ, ಅದಕ್ಕೆ ಒಪ್ಪಿ ನಾವು ಈಗಾಗಲೇ ಸರ್ಕಾರದಿಂದ ಆಜ್ಞೆಯನ್ನು ಹೊರಡಿಸಿದ್ದೇವೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಆವತ್ತು ಒಪ್ಪಿರತಕ್ಕದ್ದು, ಹಿಂದೆ ವೇತನದ ಬಾಕಿ 63 ಕೋಟಿಯಾಗುತ್ತದೆ. ಅದನ್ನು ತಾವು ತಕ್ಷಣ, ತಾವು ವಿದ್ಯುಚ್ಛಕ್ತಿಗೆ ಬೇರೆಯದ್ದರಿಂದ ಹೇಗೆ ಡೈವರ್ಟ್ ಮಾಡುತ್ತೀರಿ ಆ ರೀತಿಯಲ್ಲಿ ಇದನ್ನು ಡೈವರ್ಟ್ ಮಾಡಿಕೊಡಿ ಎಂದು ಹೇಳಿದ್ದೆವು. ಅದನ್ನು ಪರಿಶೀಲನೆ ಮಾಡುವುದಾಗಿ ತಾವು ಹೇಳಿದ್ದಿರಿ, ಅದನ್ನು ಇದುವರೆಗೆ ಪರಿಶೀಲನೆ ಮಾಡಿದಿರಾ? ಇಲ್ಲವೋ? ರೆಗ್ಯುಲರ್ ಆಗಿ ಕೊಡಬೇಕಾಗಿರುವುದು ಒಂದು, ಸುಮಾರು ಒಂದೆರಡು ವರ್ಷದಿಂದ ಬಾಕಿ ಇರತಕ್ಕದ್ದು ಒಂದು, ಇವೆರಡನ್ನು ಬಿಡುಗಡೆ ಮಾಡಲು ತುರ್ತಾಗಿ 63 ಕೋಟಿ ಬೇಕು ಎಂದು ತಮ್ಮ ಮುಂದೆ ಅಹವಾಲನ್ನು ಇಟ್ಟಿದ್ದೆವು, ಅದು ಬಿಡುಗಡೆಯಾಗಿಲ್ಲ, ಆದ್ದರಿಂದ ಸಂಬಳ ಕೊಟ್ಟಿಲ್ಲ. ನಿರ್ದಿಷ್ಟವಾಗಿ 40 ಪರ್‌ಸೆಂಟ್ ಹಣವನ್ನು ನೇರವಾಗಿ ಅವರ ಅಕೌಂಟ್‌ಗೆ ಕಳಿಸಬೇಕೆಂದು ಹೇಳಿದ್ದೆವು, ಅದೂ ಹೋಗಿಲ್ಲ ಬಹಳ ಮುಖ್ಯವಾದ ಮೂರನೇ ಅಂಶ, ವಿಕಾಸ ಪಂಚಾಯಿತಿಗಳಲ್ಲಿ ನೀವು ರಚನೆ

ಮಾಡುತ್ತಿದ್ದೀರಿ, ಉದ್ಯೋಗಕ್ಕೆ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಇವರನ್ನು ನಿರ್ದಿಷ್ಟವಾದಂಥ 40 ಪರ್‌ಸೆಂಟ್ ಇವರಿಗೆ ಸೀಮಿತವಾಗಿಡಬೇಕು ಎಂದು ಹೇಳಿದ್ದೆವು. ಅದರ ಬಗ್ಗೆ ಸಹ ತೀರ್ಮಾನ ತೆಗೆದುಕೊಂಡಿಲ್ಲ ಇದಕ್ಕೆ ತಾವು ಉತ್ತರ ಕೊಡಿ.

ಡಾ॥ ಹೆಚ್.ಸಿ. ಮಹದೇವಪ್ಪ: ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಎಲ್ಲಾ ವಿಷಯಗಳನ್ನೂ ನಾವು ಕೂಲಂಕುಷವಾಗಿ ಚರ್ಚೆ ಮಾಡಿ ಸರ್ಕಾರದಿಂದ ಆಜ್ಞೆಯನ್ನು ಹೊರಡಿಸಿದ್ದೇವೆ. ಆದರೆ ಇವತ್ತು ಹಣ ಬಿಡುಗಡೆ ಮಾಡಬೇಕೆಂದರೆ, ಎಷ್ಟು ಜನರಿಗೆ ಸಂಬಳ ಸಿಕ್ಕಿಲ್ಲ, ವಿದ್ಯುಚ್ಛಕ್ತಿಗೆ ಕೊಡುವ 40 ಕೋಟಿ ಹಣವನ್ನು ಒಂದು ಸಲ ಕೊಡಬೇಕೆಂದು ಅವರೇ ಸಲಹೆ ಮಾಡಿದ್ದರು. ಅದನ್ನು ಪರಿಶೀಲನೆ ಮಾಡುವುದಾಗಿ ಅವರಿಗೆ ಹೇಳಿದ್ದೇನೆ. ಯಾರ್‍ಯಾರಿಗೆ ಕೊಟ್ಟಿಲ್ಲ ಎಂಬ ಬಗ್ಗೆ ಜಿಲ್ಲಾವಾರು ವರದಿಯನ್ನು ತರಿಸಿಕೊಂಡು ಹಣಕಾಸು ಸಚಿವರ ಜೊತೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಅವರಿಗೆ ಒಂದು ವರ್ಷದಿಂದ ತೊಂದರೆಯಾಗಿದೆ. ಕೆಲವರಿಗೆ ಸಂಬಳ ಆಗದೆ ಜೀವನ ಮಾಡುವುದು ಕಷ್ಟವಾಗಿದೆ. ಅದನ್ನು ಮಾಡುತ್ತೇವೆ. ಆ ಕಾರಣಕ್ಕೆ FD ಜೊತೆ ಚರ್ಚೆ ಮಾಡಿ ಏನು ನೌಕರರಿಗೆ ಬಾಕಿಕೊಡಬೇಕು, ಯಾರ್‍ಯಾರಿಗೆ ಬಾಕಿ ಉಳಿದುಕೊಂಡಿದೆ ಜಿಲ್ಲಾವಾರುಮಾಹಿತಿ ತರಿಸಿ ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇನೆ.

153 (2409) **ಶ್ರೀ ವಿ. ಸೋಮಣ್ಣ** (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

ಅ) ಬೆಂಗಳೂರು ನಗರದಲ್ಲಿರುವ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಈ ಅನುದಾನಿತ ಶಾಲೆಗಳಲ್ಲಿ ನಿವೃತ್ತಿ ಹಾಗೂ ಇತರ ಕಾರಣಗಳಿಂದ ಖಾಲಿ ಇರತಕ್ಕ ಶಿಕ್ಷಕರ ಹುದ್ದೆಗಳೆಷ್ಟು?

ಇ) ಈ ಹುದ್ದೆಗಳನ್ನು ತುಂಬಲು ಸರ್ಕಾರ ಅನುಮತಿ ನೀಡಿದೆಯೇ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬೆಂಗಳೂರು ನಗರದಲ್ಲಿರುವ ಅನುದಾನಿತ ಪ್ರಾಥಮಿಕ ಶಾಲೆಗಳ ಸಂಖ್ಯೆ–622
ಪ್ರೌಢಶಾಲೆಗಳ ಸಂಖ್ಯೆ–235